# ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಃ ಕೇಂದ್ರ ಕಛೇರಿ ಃ ಹುಬ್ಬಳ್ಳಿ.

(ಆಡಳಿತ/ಸಿಬ್ಬಂದಿ ಇಲಾಖೆ)

ಸಂಖ್ಯೆ: ವಾಕರಸಾ/ಕೇಕ/ಹು/ಸಿಬ್ಬಂದಿ/ಎ-3/1989 /2022 ದಿನಾಂಕ: 23-11-2022

## ಸಾಮಾನ್ಯ ಸಿಬ್ಬಂದಿ ಆದೇಶ ಸಂಖ್ಯೆ ಃ 4346/ 2022

ಉಲ್ಲೇಖ : ಸೂಕ್ತಾಧಿಕಾರಿಗಳ ಆದೇಶ

* * *

ಶ್ರೀಮತಿ ಕೀರ್ತಿ ಬಿ ಪೋತದಾರ, ಕಿರಿಯ ಸಹಾಯಕ-ಕಂ-ಡಿಇಒ, ಹಾವೇರಿ ವಿಭಾಗ ರವರನ್ನು ಅವರ ಕೋರಿಕೆ ಮೇರೆಗೆ ಈ ಕೂಡಲೇ ಜಾರಿಗೆ ಬರುವಂತೆ ಚಿಕ್ಕೋಡಿ ವಿಭಾಗಕ್ಕೆ ವರ್ಗಾಯಿಸಿ ನಿಯೋಜಿಸಲಾಗಿದೆ.

ಸದರಿ ಉದ್ಯೋಗಿಯ ವರ್ಗಾವಣೆಯನ್ನು ಅವರ ಕೋರಿಕೆ ಮೇರೆಗೆ ಮಾಡಿರುವುದರಿಂದ ಉದ್ಯೋಗಿಯು ಸುತ್ತೋಲೆ ಸಂಖ್ಯೆ: 775 ದಿನಾಂಕ: 09-02-1990 ರ ಪ್ರಕಾರ ಸೇವಾ ವರಿಷ್ಠತೆಯನ್ನು ಅವರು ವರ್ಗಾವಣೆಗೊಂಡ ಸ್ಥಳದಲ್ಲಿ ಹಾಜರಾದ ದಿನಾಂಕದಿಂದ ಹೊಸದಾಗಿ ಪಡೆಯುವರು. ಹಾಗೂ ಸದರಿಯವರ ಕಾರ್ಯಕ್ಷೇತ್ರದಲ್ಲಿ ಬದಲಾವಣೆ ಇರುವುದರಿಂದ ಎರಡು(02) ದಿನಗಳ ಸೇರ್ಪಡೆ ಕಾಲಾವಕಾಶಕ್ಕೆ ಮಾತ್ರ ಅರ್ಹರಿರುತ್ತಾರೆ.

ವರ್ಗಾವಣೆಗೊಳಿಸಿದ ಸಿಬ್ಬಂದಿಯನ್ನು ಈ ಕೆಳಗಿನ ಷರತ್ತು ಮತ್ತು ನಿಬಂಧನೆಗಳನ್ವಯ ಬಿಡುಗಡೆಗೊಳಿಸುವುದು.

### -ಃ ಷರತ್ತು ಮತ್ತು ನಿಬಂಧನೆಗಳು ಃ-

1. ಉದ್ಯೋಗಿಯನ್ನು ಕೋರಿದ ವಿಭಾಗಕ್ಕೆ ವರ್ಗಾಯಿಸಿರುವುದರಿಂದ ಅವರು ಪುನಃ 03 (ಮೂರು) ವರ್ಷಗೊಳಗಾಗಿ ಯಾವುದೇ ರೀತಿಯ ಕೋರಿಕೆ ವರ್ಗಾವಣೆ ಮನವಿಯನ್ನು ಸಲ್ಲಿಸುವಂತಿಲ್ಲ.
2. ಕೋರಿಕೆಯ ಮೇರೆಗೆ ವರ್ಗಾಯಿಸುವ ಸ್ಥಳದಲ್ಲಿ ಪ್ರತಿ ತಿಂಗಳು ಕನಿಷ್ಠ 22 ದಿನ ಹಾಜರಾತಿಯೊಂದಿಗೆ ಕೆಲಸ ನಿರ್ವಹಿಸುವುದು.
3. ಯಾವುದೇ ದೀರ್ಘಾವಧಿ ಗೈರು ಹಾಜರಾತಿ ಮತ್ತು ಗಂಭೀರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವಂತಿಲ್ಲ.
4. ಸಂಸ್ಥೆಯ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಉದ್ಯೋಗಿಯ ಕೋರಿಕೆಯ ಮೇರೆಗೆ ವರ್ಗಾವಣೆ ಮಾಡಿದ್ದು, ಈ ಸದುದ್ದೇಶವನ್ನು ಅವರು ತಮ್ಮ ಸೇವೆಯಲ್ಲಿ ಸಮರ್ಪಕವಾಗಿ ಉಪಯೋಗಿಸಿಕೊಂಡು ಸಾರ್ವಜನಿಕರಿಗೆ ಸಮರ್ಪಕ ಸಾರಿಗೆ ಸೇವೆ / ಸೌಲಭ್ಯ ಒದಗಿಸುವಲ್ಲಿ ಶ್ರಮಿಸುವುದು.
5. ಸಂಸ್ಥೆಯ ಮೇಲ್ಕಂಡಂತೆ ವಿಧಿಸಿದ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಸಂಸ್ಥೆಯು ಅವರನ್ನು ಯಾವುದೇ ವಿಭಾಗದ ಯಾವುದೇ ಘಟಕಕ್ಕೆ ವರ್ಗಾಯಿಸುವ ಹಕ್ಕನ್ನು ಹೊಂದಿರುತ್ತದೆ.

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು

ರಿಗೆ,
ಶ್ರೀಮತಿ ಕೀರ್ತಿ ಬಿ ಪೋತದಾರ
ಕಿರಿಯ ಸಹಾಯಕ-ಕಂ-ಡಿಇಒ,
ಹಾವೇರಿ ವಿಭಾಗ,
(ವಿ.ನಿ ಹಾವೇರಿ ವಿಭಾಗ ರವರ ಮುಖಾಂತರ)

ಪ್ರತಿಯನ್ನು ಆದರಪೂರ್ವಕವಾಗಿ ಃ

- ಉಪ ಮುಖ್ಯ ಗಣಕ ವ್ಯವಸ್ಥಾಪಕರು, ವಾಕರಸಾ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಆದೇಶದ ಪ್ರತಿಯನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
- ವಿಭಾಗೀಯ ನಿಯಂತ್ರಣಾಧಿಕಾರಿ, ವಾ ಕ ರ ಸಾ ಸಂಸ್ಥೆ, ಹಾವೇರಿ ವಿಭಾಗ ರವರ ಮಾಹಿತಿಗಾಗಿ ಹಾಗೂ ಈ ಮೇಲ್ಕಂಡ ಷರತ್ತು ನಿಬಂಧನೆಗಳನ್ನು ವಿಧಿಸಿ ವಿಭಾಗದಿಂದ ಬಿಡುಗಡೆಗೊಳಸುವ ಬಗ್ಗೆ ಅಗತ್ಯ ಕ್ರಮಕೈಗೊಳ್ಳಲು ಕೋರಿದೆ.
- ವಿಭಾಗೀಯ ನಿಯಂತ್ರಣಾಧಿಕಾರಿ, ವಾ ಕ ರ ಸಾ ಸಂಸ್ಥೆ, ಚಿಕ್ಕೋಡಿ ವಿಭಾಗ ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು:

- ಮಾನ್ಯ ಉಪಾಧ್ಯಕ್ಷರು / ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿ ರವರ ಮಾಹಿತಿಗಾಗಿ ಕಳುಹಿಸಿದೆ.